**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ**

ಸೆಷನ್ಸ್ ಕೇಸ್ ನಂಃ 6/2020 ಪಿ.ಡಬ್ಲ್ಯೂಃ 10

ಸಿ.ಡಬ್ಲ್ಯೂಃ 27

| | |
|---|---|
| ಸಾಕ್ಷಿದಾರರ ಹೆಸರು | ಬಾಲರಾಜ್ |
| ತಂದೆಯ ಹೆಸರು | ಹಿರಿಯಣ್ಣ ಗೌಡ |
| ವಯಸ್ಸು | 46 ವರ್ಷ |
| ಉದ್ಯೋಗ | ಕೃಷಿ |
| ವಿಳಾಸ | ಹಾಲಗುಡ್ಡೆ, ರಿಪ್ಪನ್ ಪೇಟೆ, ಶಿವಮೊಗ್ಗ |

ದಿನಾಂಕಃ 09-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನಾನು ಶಿವಮೊಗ್ಗದ ರಿಪ್ಪನ್ ಪೇಟೆಯ ಹಾಲಗುಡ್ಡೆ ಗ್ರಾಮದಲ್ಲಿ ವಾಸವಾಗಿದ್ದೇನೆ. ನನ್ನ ಬಳಿ ಮಾರುತಿ 800 ಕಾರು ಇತ್ತು. ಅಂದರ ನಂಬ್ರ ಸಿ ಆರ್ ಡಬ್ಲ್ಯುಃ 8889.ಅದು ನನ್ನ ತಂದೆಯ ಹೆಸರಿನಲ್ಲಿ ಇತ್ತು. ಅದನ್ನು ನಾನು ಬಳಸುತ್ತಿದ್ದೆ. ದಿನಾಂಕ 14-09-2018 ರಂದು ನಾನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ನನ್ನ ತಾಯಿಯ ಆರೋಗ್ಯ ತಪಾಸಣೆಗಾಗಿ ಹೋಗಿದ್ದೆ. ಕಾರನ್ನು ಆಸ್ಪತ್ರೆಯ ಮುಂಭಾಗದಲ್ಲಿ ನಿಲ್ಲಿಸಿದ್ದೆ. ಆಗ ಮದ್ಯಾಹ್ನದ 11.45 ರ ಸಮಯ. ತಾಯಿಯನ್ನು ಅಲ್ಲಿ ಅಡ್ಮಿಟ್ ಮಾಡಬೇಕೆಂದು ಹೇಳಿದ್ದರು. ಅದಕ್ಕಾಗಿ ನಾನು ಕಾರು ಬಳಿ ನೋಡಲು ಹೋಗಿದ್ದೆ. ಆಗ 12.45 ರ ಸಮಯ. ಆಗ ಅಲ್ಲಿ ಕಾರು ಇರಲಿಲ್ಲ. ಅದಕ್ಕಾಗಿ ಹುಡುಕಾಡಿದೆ. ದಿನಾಂಕ 15-09-2018 ರಂದು ದೊಡ್ಡಪೇಟೆ ಠಾಣೆಯಲ್ಲಿ ದೂರನ್ನು ಕೊಟ್ಟಿದ್ದೆ. ನಾನು ನೀಡಿದ್ದ ದೂರನ್ನು ಈಗ ನೋಡಿ ಅದನ್ನು **ನಿಶಾನೆ ಪಿ-14 ಎಂದು**, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ-14(ಎ) ಎಂದು ಗುರುತಿಸಿದ್ದೇನೆ.

2) ದೂರು ಕೊಟ್ಟ ಸುಮಾರು ಒಂದು ವರ್ಷದ ನಂತರ ದೊಡ್ಡಪೇಟೆ ಪೊಲೀಸರು ನನಗೆ ಪೋನ್ ಮಾಡಿ ಕಾಪು ಠಾಣೆಯಲ್ಲಿ ನನ್ನ ವಾಹನ ಇರುವುದಾಗಿ ಹೇಳಿದ್ದರು. ಅದಕ್ಕಾಗಿ ನಾನು ಕಾಪು ಠಾಣೆಗೆ ಹೋಗಿ ಅಲ್ಲಿ ಇದ್ದ ನನ್ನ ವಾಹನವನ್ನು

ನೋಡಿ ಗುರುತಿಸಿದ್ದೆ. ನನ್ನ ವಾಹನದ ನಂಬ್ರ ಪ್ಲೇಟ್ ಇರಲಿಲ್ಲ. ನನ್ನ ವಾಹನದ ಇಂಜಿನ್ ನಂಬ್ರ ಮತ್ತು ಚೇಸಿಸ್ ನಂಬ್ರ ಇರಲಿಲ್ಲ. ನಾನು ಸದರಿ ಕಾರಿನ ಹಿಂಬದಿಯ ಗ್ಲಾಸ್ ನಲ್ಲಿ ನನ್ನ ಮಕ್ಕಳಾದ ಆರಾಧ್ಯ ಮತ್ತು ಅಭಯ್ ಎಂಬ ಹೆಸರಿನ ಸ್ಟಿಕ್ಕರ್ ಅಂಟಿಸಿದ್ದೆ. ಆ ಸ್ಟಿಕ್ಕರ್ ಹಾಗೆಯೇ ಇತ್ತು. ಅದರ ಆಧಾರದಿಂದಲೇ ಆ ವಾಹನವನ್ನು ಗುರುತಿಸಿದ್ದೆ.

3) ನಂತರ ನಮ್ಮ ವಾಹನವನ್ನು ಶಿವಮೊಗ್ಗದ ದೊಡ್ಡಪೇಟೆ ಠಾಣೆಗೆ ವರ್ಗಾಯಿಸಿದ್ದರು. ನಂತರ ನಾನು ಬಿಡಿಸಿಕೊಂಡಿದ್ದೆ. ಕಾಪು ಠಾಣೆಯಲ್ಲಿ ಸಹ ನನ್ನನ್ನು ವಿಚಾರಿಸಿದ್ದರು. ಆಗ ನಾನು ಹೇಳಿಕೆಯನ್ನು ಸಹ ಕೊಟ್ಟಿದ್ದೆ. ಸದರಿ ವಾಹನವನ್ನು ಪಾಷ ಎನ್ನುವವರು ಕಳ್ಳತನ ಮಾಡಿ, ತಮಿಳುನಾಡಿಗೆ ಮಾರಾಟ ಮಾಡಿದ್ದರು ಎಂದು ಪೊಲೀಸರಿಂದ ತಿಳಿದಿತ್ತು.

**ಪಾಟೀಸವಾಲುಃ ಶ್ರೀ ಎ.ಬಿ.ಹೆಚ್. ವಕೀಲರಿಂದ 3 ಮತ್ತು 4 ನೇ ಆರೋಪಿತರ ಪರವಾಗಿ**

1) ಕಾಪು ಠಾಣೆಯಲ್ಲಿ ನಾನು ಕಾರನ್ನು ಗುರುತಿಸಿದಾಗ ಅದು ಯಾರಿಂದ ಕಳ್ಳತನವಾಗಿ, ಯಾರಿಗೆ ಮಾರಾಟ ಆಗಿತ್ತು ಎಂದು ಹೇಳಿಲ್ಲ ಎಂದರೆ ನಿಜ. ನಾನು ನನ್ನ ವಾಹನವನ್ನು ಪೊಲೀಸರೊಂದಿಗೆ ಕಾಪು ಠಾಣೆಯಿಂದ ತೆಗೆದುಕೊಂಡು ಹೋಗಿದ್ದೆ. ಆ ವಾಹನವನ್ನು ಕಾಪು ಠಾಣೆಯಿಂದ ತೆಗೆಯುತ್ತಿದ್ದಾಗ ಪೋಟೋ ತೆಗೆದಿರಬಹುದು. ನನ್ನ ಕಾರಿನ ದಾಖಲೆಗಳನ್ನು ಕಾಪು ಪೊಲೀಸರಿಗೆ ಒದಗಿಸಿದ್ದೇನೆ. ನಾನು ಕಾಪು ಠಾಣೆಗೆ ಬಂದಿಲ್ಲ ಮತ್ತು ಅಲ್ಲಿ ನಾನು ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಅಲ್ಲಿ ನನ್ನ ವಾಹನವನ್ನು ನೋಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ -**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ